ಶ್ರೀ ಎಂ. ಎನ್. ರಾಮಣ್ಣ.—ಕೆಲವು ಸೊಸೈಟಿಗಳವರು ಹೌಸಿಂಗ್ ಕಾರ್ಪೊರೇಷನ್‌ಗೆ ಸಾಲಕ್ಕಾಗಿ ಅಪ್ಲಿಕೇಷನ್ ಕಳಿಸಿದಾಗ, ಅವರು ಜನಸಂಖ್ಯೆ ಆಧಾರವ ಮೇರೆ ಹಣ ಕೊಟ್ಟಿದ್ದೇವೆ ಮತ್ತೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಸರ್ಕಾರದವರು ಪ್ರಶ್ನೆಗೆ ಉತ್ತರವಾಗಿ 1966-67ರಲ್ಲಿ 1,08,36,000 ರೂಪಾಯಿಗಳನ್ನು ಮಂಜೂರು ಮಾಡಿ, 25, 18, 415 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಅಂದರೆ ಕಾಲು ಭಾಗ ಹಣವನ್ನು ಖರ್ಚು ಮಾಡಿದ್ದಾರೆ. ಎರ್ನಾ ಜಿಲ್ಲೆಯಲ್ಲರುವ ಸೊಸೈಟಿಯವರು ತಮ್ಮ ಅಪ್ಲಿಕೇಷನ್‌ಗಳನ್ನು ಸೆಂಟ್ರರ್ ಆಫೀಸ್‌ಗೆ ಕಳಿಸಿ, ನಂತರ ಮಂಜೂರಾಗಬೇಕಾಗಿರುವುದರಿಂದ ಬಹಳ ನಿಧಾನವಾಗುತ್ತಿದೆ. ಆದ್ದರಿಂದ ಜಿಲ್ಲಾವಾರು ಹಣವನ್ನು ಹಂಚಿಕೆ ಮಾಡಿ, ಆಯಾ ಜಿಲ್ಲೆಯವರೇ ನೇರವಾಗಿ ಹಣವನ್ನು ಹಂಚುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಈ ಯೋಜನೆ ಪ್ರಕಾರ ಕಾರ್ಪೊರೇಷನ್ ಅವರೇ ಹಣವನ್ನು ಹಂಚಬೇಕು. ಸರ್ಕಾರದವರು ಹಸ್ತಕ್ಷೇಪ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಅರ್ಬನ್ ಏರಿಯಾದಲ್ಲಿ ಷೆಡ್ಯೂಲ್ಕ್ಯಾಸ್ಟ್ ಕೋಆಪರೇಟಿವ್ ಸೊಸೈಟಿಗಳ ಮೆಂಬರುಗಳಿಗಾಗಿ ಮನೆಗಳನ್ನು ಕೊಡುವಾಗ ಹಾಗೂ ಸೈಟುಗಳನ್ನು ಕೊಡುವಾಗ ಯಾರು ಹೈಯಸ್ಟ್ ಬಿಡ್ಡರ್ ಇರುತ್ತಾರೋ ಅವರು ನಾನ್ ಷೆಡ್ಯೂಲ್ ಕ್ಯಾಸ್ಟ್ ವರ್ಗಕ್ಕೆ ಸೇರಿರುವುದರಿಂದ ಇದ್ದರೂ ಅಂತಹವರಿಗೇ ಕೊಡುತ್ತಾರೆ. ಇದಕ್ಕೆ ಬದಲು ಹರಾಜು ಮಾಡುವಾಗ ಷೆಡ್ಯೂಲುಕಾಸ್ಟು ವರ್ಗದವರಿಗೇ ಯಾರು ಹೈಯಸ್ಟ್ ಬಿಡ್ಡರ್ ಇರುತ್ತಾರೋ ಅವರಿಗೇಕೆ ಕೊಡುವಂತೆ ಮಾಡಬಾರದು ?

ಶ್ರೀ ಪಿ. ಎಂ. ನಾಡಗೌಡ.—ಈ ವಿಚಾರ ಸರಕಾರದ ಗಮನಕ್ಕೆ ಬಂದಿಲ್ಲ. ಇಂತಹುದು ಯಾವುದಾದರೂ ವಿಚಾರ ಇದ್ದರೆ ಅದನ್ನು ಸರಕಾರದ ಗಮನಕ್ಕೆ ತಂದರೆ ಆಗ ವಿಚಾರ ಮಾಡುತ್ತೇವೆ.

Marconahalli Reservoir

*Q.—489. Sri M. H. JAYAPRAKASH NARAYAN (Sirsi).—

Will the Minister for Public Works be pleased to state :—

(*a*) the extent of the atchkat of Marconahalli Reservoir in Kunigal Taluk ?

(*b*) the quantity of water in the said reservoir at presnet ;

(*c*) the number of acres in which the ryots have grown summer crops at present ;

(*d*) whether it has come to their notice that Paddy and Ragi crops are withering away for want of proper water supply ;

(*e*) whether representations have been received by them stating that the water is being wasted in plenty for want of proper sluice and as such it is not possible to supply water ;

(*f*) the compensation that they would give to the ryots if they sustain loss by the withering away of the summer crops grown by them for want of water supply ?

A.—Sri ALUR HANUMANTHAPPA (Deputy Minister for Minor Irrigation).—

(*a*) 12,420 acres.

(*b*) 2,730 units.

(*c*) About 8,000 acres.

(*d*) No crops have withered since water supply was arranged.

(*e*) Yes; but prompt action taken to prevent wastage of water;

(*f*) Does not arise in view of reply to cluse (*d*) of the question.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಉತ್ತರದಲ್ಲಿರುವಂತೆ ಕೊಟ್ಟಿರುವ ಎಕರೆಗಳನ್ನು ನೋಡಿದರೆ ಸುಮಾರು ನಾಲ್ಕು ಸಾವಿರ ಎಕರೆಗಳಷ್ಟು ಭೂಮಿಗೆ ನೀರು ಕೊಟ್ಟಿಲ್ಲ ಎಂದು ಕಂಡುಬರುತ್ತದೆ. ಈ ನಾಲ್ಕು ಸಾವಿರ ಎಕರೆಗೆ ಏತಕ್ಕೆ ನೀರು ಕೊಡಲಿಲ್ಲ?

† ಶ್ರೀ ಆಲೂರು ಹನುಮಂತಪ್ಪ.— ಇದರಲ್ಲಿ ಡೈರೆಕ್ಟ್ ಅಚ್ಚುಕಟ್ಟು 8000 ಎಕರೆಗಳಷ್ಟು ಎಂದು ಇದ್ದರೂ ಇಂಡೈರೆಕ್ಟ್ ಅಚ್ಚುಕಟ್ ಎಂದು ಬೇರೆ ಬರುತ್ತದೆ. ಎಂದರೆ ಇಲ್ಲಿರುವ ದೊಡ್ಡ ಉಪ್ಪಲಹಾಗೂ ಚಂದಪ್ಪನ ಅಣೆ ಟ್ಯಾಂಕುಗಳಿಂದಲೂ ಇದಕ್ಕೆ ನೀರು ಸಿಗುತ್ತದೆ ಮತ್ತು ಇದರಿಂದ ನೀರಾವರಿಯಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಬೇಸಿಗೆ ಬೆಳೆಯನ್ನು ಮಾಡಿದುದರಿಂದ ಇಲ್ಲಿ ಉತ್ಪನ್ನವಾದ ದವಸಗಳು ಎಷ್ಟು?

ಶ್ರೀ ಆಲೂರು ಹನುಮಂತಪ್ಪ.—ಇದರ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಎಂ. ಎಚ್ ಜಯಪ್ರಕಾಶ ನಾರಾಯಣ್.—ಬೇಸಿಗೆ ಬೆಳೆಗಾಗಿ ನೀರು ಕೊಟ್ಟು ಇಲ್ಲಿ ತಾಯ್ ಜುಂಗ್ ಭತ್ತವನ್ನು ಬೆಳೆಯಬೇಕೆಂದು ಮಾಡಿದುದರಿಂದ ಅನೇಕ ರೈತರಿಗೆ ಇದರಿಂದ ನಷ್ಟವಾಯಿತಲ್ಲವೇ?

ಶ್ರೀ ಆಲೂರು ಹನುಮಂತಪ್ಪ.—ಹೆಚ್ಚು ಭತ್ತ ಬೆಳೆದಿದ್ದಾರೆ ಎಂದು ಸರಕಾರದ ಗಮನಕ್ಕೆ ಬಂದಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇಲ್ಲಿ ತಾವೇ ಹೇಳಿರುವಂತೆ 2730 ಯೂನಿಟ್ಟುಗಳಷ್ಟು ನೀರಿದೆ. ಈ ನೀರು 8000 ಎಕರೆಗಳಷ್ಟು ಭೂಮಿಗೆ ಸಾಕಾಗುತ್ತದೆಯೇ?

ಶ್ರೀ ಆಲೂರು ಹನುಮಂತಪ್ಪ.—ಇದು ಒಂದು ದೊಡ್ಡ ರಿಸರ್ವಾಯರು. ಇದರಲ್ಲಿ ನೀರು ಬಿಡುವುದಕ್ಕೂ ಹಾಗೂ ಶೇಖರಿಸುವುದಕ್ಕೂ ಕಂಟ್ರೋಲಿಂಗ್ ಪವರು ಇರುತ್ತದೆ. ಇದನ್ನು ಚೆಕ್ ಮಾಡಿಕೊಂಡು ಆರು ದಿನಗಳಷ್ಟು ಕಾಲ ನೀರು ನಿಲ್ಲಿಸಿಕೊಂಡು ಅದನ್ನು ಏಳು ದಿನಗಳವರೆಗೆ ಉಪಯೋಗಿಸಿಕೊಳ್ಳಲು ಇಲ್ಲಿ ತಕ್ಕ ವ್ಯವಸ್ಥೆ ಮಾಡಿದ್ದಾರೆ.

Sri C. K. RAJAIAH SHETTY.—How many acres could be cultivated from one unit of water?

Sri ALUR HANUMANTHAPPA.—Two and a half acres.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಈ ಹಿಂದೆ ಕೊಟ್ಟ ವಿವರಕ್ಕೂ ಈಗ ಮಾನ್ಯ ಉಪಮಂತ್ರಿಗಳು ಕೊಟ್ಟಿರುವ ಉತ್ತರಕ್ಕೂ ಬಹಳ ತಾರತಮ್ಯ ಇದೆ ಎನ್ನುವುದು ಕಂಡು ಬರುತ್ತದೆ. ಇದರಲ್ಲಿ ಯಾವುದು ಸರಿ ಎಂದು ತೆಗೆದುಕೊಳ್ಳುವುದು?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಇದರಲ್ಲಿ ಯಾವ ತಾರತಮ್ಯವೂ ಇಲ್ಲ. ಎಲ್ಲ ಇದರಲ್ಲಿ ಸ್ಪಷ್ಟವಾಗಿಯೇ ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರಲ್ಲಿ ಎಷ್ಟು ಎಕರೆಗಳಲ್ಲಿ ನೀರು ಕೊಟ್ಟು ಬೇಸಿಗೆ ಬೆಳೆ ಬಂದಿದೆ ಎಂದು ಕೇಳಿದುದರಲ್ಲಿ ಒಂದು ರೀತಿಯಾಗಿ ಇಷ್ಟು ಎಕರೆಗಳಷ್ಟು ಎಂದು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಹೇಳಿದ್ದಕ್ಕೂ ಇದಕ್ಕೂ ವ್ಯತ್ಯಾಸವಿದೆ. ಅದಕ್ಕಾಗಿ ಇದರಲ್ಲಿ ಯಾವುದು ನಿಜ ಯಾವುದು ನಿಜವಲ್ಲ ಅದನ್ನು ಹೇಳಬೇಕಾಗಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಇದು ಸರಿಯಾದ ಪ್ರಶ್ನೆ ಮತ್ತು ಸರಿಯಾದ ಉತ್ತರವನ್ನೇ ಕೊಡಲಾಗಿದೆ. ಪೊನ್ನೆ ಕೇಳಿದಾಗ ನಮ್ಮರ್ ಕ್ಯಾಪ್‌ಗಳನ್ನು ಇಲ್ಲಿ ಬೆಳೆಯುವಾಗ ನೀರಿಲ್ಲದೆ ಭತ್ತ ಹಾಗೂ ರಾಗಿ ಬೆಳೆಗಳು ಸರಿಯಾಗಿ ಬರಲಿಲ್ಲ ಇದರಲ್ಲಿ ಎಷ್ಟೋ ಕಡೆಗಳಲ್ಲಿ ಬೆಳೆಯಾಗದೆ ದುರುಪಯೋಗಗಳಾಗಿವೆ ಮತ್ತು ಹೆಚ್ಚು ಭತ್ತ ಬರಬೇಕೆಂದು ಇದ್ದರೂ ಬರಲಿಲ್ಲ. ಹಾಗೇನೂ ಇಲ್ಲಿ ಆಗಿಲ್ಲ. ಕೆಲವು ರೈತರು ಬಹಳ ಚೆನ್ನಾಗಿ ನೀರು ಉಪಯೋಗಿಸಿಕೊಂಡು ಬೆಳೆದಿದ್ದಾರೆ. ಇದರಲ್ಲಿ ಶೇಕಡ ಐವತ್ತರಷ್ಟು ಬೆಳೆ ಕೂಡ ಬಂದಿದೆ. ಎಲ್ಲೋ ಆಲ್ಪ ಸ್ವಲ್ಪ ಲುಕ್ಸಾನುಗಳು ಆಗಿರಬಹುದು ಅಷ್ಟೇ.

Munsiff Court at Shikaripur

*Q.—511. Sri G. BASAVANNAPPA (Shikaripur).—

Will the Minister for Law and Parliamentary Affairs be pleased to State :—

(*a*) the stage at which the proposal for starting of a Munsiff Court at Shikaripur in Shimoga District stands at present ;

(*b*) the reasons for the delay in starting the same ?

A.—Sri S. R. KANTHI (Minister for Law).—

(*a*) The proposal has been dropped.

(*b*) Does not arise.

Sri G. BASAVANNAPPA.—May I know the reason for dropping the proposal and what would be the next alternative ?

Sri S. R. KANTHI.—The proposal has been dropped because of the opposion from the Sorab Taluk.

Sri H. SIDDAVEERAPPA.—May I know whether the Government would through the hon'ble member get the views of the constituency by sending the member there and find out whether they do want a Munsiff court there or not ?

Sri S. R. KANTHI.—That is a suggestion for action.

Hassan-Mangalore Railway Line

*Q.—528. Sri L. SRIKANTIAH (Nanjangud).—

Will the Minister for Public Works be pleased to state :—

(*a*) whether State Government has recommended to the Centre to lay Broad Gauge on new Hassan-Mangalore line ;

(*b*) whether the State Government requested the Centre at any time the need for converting the present Metre Gauge into Broad Gauge in the State of Mysore ?